ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/ನೋಂದಣಿ/01/2017-18 ದಿನಾಂಕ 16/11/2017

– ಸುತ್ತೋಲೆ –

ವಿಷಯ : ಏಪ್ರಿಲ್-2018 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ನೋಂದಣಿ ಮಾಹಿತಿಗಳನ್ನು ಎಸ್.ಎ.ಟಿ.ಎಸ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

ಉಲ್ಲೇಖ : 1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅನುಮೋದನೆ ದಿನಾಂಕ 13/11/2017

2) ದಿನಾಂಕ 15/11/2017 ರಂದು ರಾಜ್ಯ ಯೋಜನಾ ಕಛೇರಿಯ ಸಭೆಯ ನಡಾವಳಿ

2) ಈ ಕಛೇರಿಯ ಅಧಿಸೂಚನೆ ಸಂ. ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2018/2017-18 ದಿನಾಂಕ 08/08/2017

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಿವಿಧ ಚಟುವಟಿಕೆಗಳನ್ನು ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ಮೊದಲ ಹಂತವಾಗಿ ವಿದ್ಯಾರ್ಥಿಗಳ ನೋಂದಣಿ ಕಾರ್ಯವನ್ನು ಪ್ರತಿ ವರ್ಷದಂತೆ ಓ.ಎಮ್.ಆರ್ ಬಳಸಿ ಮಾಡುವ ಬದಲು ಎಸ್.ಎ.ಟಿ.ಎಸ್ ಆಧಾರಿತ ಮಕ್ಕಳ ಮಾಹಿತಿಯೊಂದಿಗೆ ಹೆಚ್ಚುವರಿ ಮಾಹಿತಿ ಸಂಗ್ರಹಿಸಿ ತಯಾರಿಸಲು ನಿರ್ಧರಿಸಲಾಗಿದೆ. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯಲ್ಲಿನ ಏಪ್ರಿಲ್ -2018 ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವಂತೆ ಈ ಮೂಲಕ ಆದೇಶಿಸಿದೆ.

1) ಮಾಹಿತಿಗಳನ್ನು ಅಪ್ ಲೋಡ್ ಮಾಡಲು ಬಳಸಬೇಕಾದ ಫಾರಂ ನ್ನು sts.karnataka.gov.in, schooleducation.kar.nic.in ಅಥವಾ http://www.kseeb.kar.nic.in ಜಾಲತಾಣಗಳ ಮೂಲಕ ತಲುಪಬಹುದಾಗಿದೆ.
2) ಮುಖ್ಯಶಿಕ್ಷಕರಿಗೆ ಎಸ್.ಎ.ಟಿ.ಎಸ್ ವತಿಯಿಂದ ಈಗಾಗಲೇ ನೀಡಿರುವ username and password ಬಳಸಿ ಆನ್ ಲೈನ್ ನೋಂದಣಿ ಕಾರ್ಯ ಮಾಡಬಹುದಾಗಿದೆ.
3) ಏಪ್ರಿಲ್-2018 ರಲ್ಲಿ ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಶಾಲಾ ವಿದ್ಯಾರ್ಥಿಗಳು ಹಾಗು ಖಾಸಗಿ ಅಭ್ಯರ್ಥಿಗಳಿಗೆ ಮಾತ್ರ ಈ ಆನ್‌ಲೈನ್ ಫಾರಂ ಬಳಸುವುದು.
4) ಪುನರಾವರ್ತಿತ ಶಾಲಾ ಅಭ್ಯರ್ಥಿಗಳ ಹಾಗು ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳ ಮಾಹಿತಿಗಳು ಈಗಾಗಲೇ ಮಂಡಳಿಯನ್ನು ತಲುಪಿದ್ದು ಗಣಕೀಕರಣಗೊಂಡಿದ್ದು ಈ ಸುತ್ತೋಲೆ ಈ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.
5) ದಿನಾಂಕ 20/11/2017 ರಿಂದ ದಿನಾಂಕ 10/12/2017 ರ ವರೆಗೆ ಮಾಹಿತಿಯನ್ನು ಅಪ್ ಲೋಡ್ ಮಾಡಲು ಕಾಲಾವಧಿಯನ್ನು ನಿಗಧಿಪಡಿಸಲಾಗಿದೆ.
6) ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದ ವಿದ್ಯಾರ್ಥಿಯ ಬಹುತೇಕ ಮಾಹಿತಿಗಳನ್ನು ಎಸ್.ಎ.ಟಿ.ಎಸ್ ಡೇಟಾಬೇಸ್ ನಿಂದ ಪಡೆಯುತ್ತಿರುವುದರಿಂದ ಈಗಿರುವ ಮಾಹಿತಿಗಳಲ್ಲಿ ಇರಬಹುದಾದ ತಪ್ಪುಗಳನ್ನು ಈ ಕೆಳಕಂಡಂತೆ ಸರಿಪಡಿಸಿ ನಂತರ ಪರೀಕ್ಷಾ ನೋಂದಣಿ ಫಾರಂ ಭರ್ತಿ ಮಾಡುವುದು.

   Menu -- student management—admission details—update student details

   Menu—student management—sslc nominal roll—regular students form—go for update student details (below the form)

7) ಎಸ್.ಎಸ್.ಎಲ್.ಸಿ ನಾಮಿನಲ್ ರೋಲ್‌ನಲ್ಲಿ ಸೇವ್ ಮಾಡಿದ ನಂತರ ವಿದ್ಯಾರ್ಥಿ ಮಾಹಿತಿಯಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ಈ ಕೆಳಕಂಡಂತೆ ಸರಿಪಡಿಸಲು ಅವಕಾಶವಿದೆ.

   - Menu—student management—sslc nominal roll – update student details

8) ಎಸ್.ಎಸ್.ಎಲ್.ಸಿ ಪರೀಕ್ಷಾ ಆನ್‌ಲೈನ್ ನೋಂದಣಿಯ ಬಗ್ಗೆ ಎಸ್.ಎ.ಟಿ.ಎಸ್ ಮುಖಪುಟದಲ್ಲಿನ ಮಾರ್ಗದರ್ಶಿಯನ್ನು ಗಮನಿಸಬಹುದಾಗಿದೆ.

9) ಆನ್ ಲೈನ್ ಡೇಟಾ ಎಂಟ್ರಿ ಪ್ರಾರಂಭಿಸುವ ಮೊದಲು ಶಾಲೆಯ ಪ್ರತಿ ವಿದ್ಯಾರ್ಥಿಯ ಭಾವಚಿತ್ರ (15–25ಕೆಬಿ) ಹಾಗು ಸಹಿಯನ್ನು (10–15ಕೆಬಿ) ಸ್ಕ್ಯಾನ್ ಮಾಡಿ ಅವರ ಎಸ್.ಎ.ಟಿ.ಎಸ್. ನೋಂದಣಿ ಸಂಖ್ಯೆಯಂತೆ ಸೇವ್ ಮಾಡಿಟ್ಟುಕೊಳ್ಳುವುದು. (jpg, jpeg or png form)

10) ಆನ್ ಲೈನ್ ಡೇಟಾ ಎಂಟ್ರಿ ಕಾರ್ಯಕ್ಕಾಗಿ ಈ ವರ್ಷ ಪ್ರತಿ ವಿದ್ಯಾರ್ಥಿಗೆ ರೂ. 5/– ರಂತೆ ಅನುದಾನವನ್ನು ಮಂಡಳಿಯಿಂದ ಬಿಡುಗಡೆ ಮಾಡಲಾಗುವುದು. ಪ್ರಸ್ತುತ, ಮರು ಹೊಂದಾಣಿಕೆಯ ಷರತ್ತಿನ ಮೇಲೆ ಶಾಲೆಯಲ್ಲಿ ಲಭ್ಯವಿರುವ ಸರ್ಕಾರೇತರ ಖಾತೆಯಿಂದ ಖರ್ಚು ಭರಿಸಲು ಅನುಮತಿ ನೀಡಿದೆ.

11) ಪ್ರಸ್ತುತ ಆನ್‌ಲೈನ್ ಮೂಲಕ ಭರ್ತಿ ಮಾಡಲಾದ ವಿದ್ಯಾರ್ಥಿಗಳ ವಿವರಗಳು ಅಂಕಪಟ್ಟಿ ಹಾಗು ವರ್ಗಾವಣೆ ಪತ್ರಗಳಲ್ಲಿ ನಮೂದಾಗುವುದರಿಂದ ಯಾವುದೇ ತಪ್ಪುಗಳು ಆಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದೆ. <u>ನಿಗದಿತ ದಿನಾಂಕದ ನಂತರ ತಾವುಗಳು ನೀಡುವ ಮಾಹಿತಿಗಳನ್ನು ಫ್ರೀಜ್ ಮಾಡುವುದರಿಂದ ನಂತರ ವಿದ್ಯಾರ್ಥಿಗಳ ವಿವರಗಳಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶ ನೀಡಲಾಗುವುದಿಲ್ಲ.</u>

ಮುಖ್ಯಶಿಕ್ಷಕರಿಗೆ ಎಸ್.ಎ.ಟಿ.ಎಸ್ ವತಿಯಿಂದ ಈಗಾಗಲೇ ನೀಡಿರುವ username and password ನ್ನು ಗೌಪ್ಯವಾಗಿಟ್ಟುಕೊಳ್ಳುವುದು.

ನಿರ್ದೇಶಕರು (ಪರೀಕ್ಷೆಗಳು)
(ಸುಮಂಗಲ. ವಿ)

ಅಗತ್ಯ ಕ್ರಮಕ್ಕಾಗಿ :

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಮಾನ್ಯತೆ ಪಡೆದಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ

ಪ್ರತಿಗಳನ್ನು

1. ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ, ಬೆಂಗಳೂರು
4. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ
6. ನಿರ್ದೇಶಕರು, ಪ್ರೌಢಶಿಕ್ಷಣ, ಮಾನ್ಯ ಆಯುಕ್ತರ ಕಛೇರಿ.
7. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ ಹಾಗು ಕಲಬುರ್ಗಿ ವಿಭಾಗಗಳು

ಇವರುಗಳಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.